Publication : Prajavani
Date: Sept 15, 2014
Page No: 4, Metro
Edition: Bangalore

SARA Media Net
Simply communicate...

# ಚಂದನವನದಲ್ಲಿ ರಾಹುಲ್



ವಿಶ್ವರೂಪಂ, ಮಿಸ್ಟರ್ ಅಂಡ್ ಮಿಸಸ್ ಅಯ್ಯರ್, ಜಪಾನೀಸ್ ವೈಫ್, ಪ್ಯಾರ್ ಕೀ ಸೈಡ್ ಎಫೆಕ್ಟ್ಸ್‌, ಈ ಸಿನಿಮಾಗಳನ್ನು ನೋಡಿದವರಿಗೆ ರಾಹುಲ್ ಬೋಸ್ ಅಭಿನಯ ಕೌಶಲದ ಪರಿಚಯ ಇದ್ದೇ ಇರುತ್ತದೆ. ತಮ್ಮ ನಟನೆ ಮೂಲಕ ಚಿತ್ರಕ್ಕೆ ಶಕ್ತಿ ತುಂಬುವ ರಾಹುಲ್ ಈಗ ಕನ್ನಡ ಸಿನಿಮಾದಲ್ಲೂ ನಟಿಸಲಿದ್ದಾರೆ.

ಗಿರೀಶ್ ಕಾಸರವಳ್ಳಿ ಮಗ ಅಪೂರ್ವ ಕಾಸರವಳ್ಳಿ ಅವರ ನಿರ್ದೇಶನದ ಪ್ರಥಮ ಚಿತ್ರ 'ನಿರುತ್ತರ'ದಲ್ಲಿ ಕಾರ್ಪೊರೇಟ್ ಎಕ್ಸಿಕ್ಯುಟಿವ್ ಪಾತ್ರದಲ್ಲಿ ರಾಹುಲ್ ಕಾಣಿಸಿಕೊಳ್ಳಲಿದ್ದಾರೆ. ನಟಿ ಐಂದ್ರಿತಾ, ಭಾವನಾ ಹಾಗೂ ಕಿರಣ್ ಶ್ರೀನಿವಾಸ್ ಇರಲಿದ್ದಾರೆ.

ಅಭಿನಯದಲ್ಲಿ ಪಳಗಿರುವ ರಾಹುಲ್ ಅವರಿಗೆ ಅಪೂರ್ವ ಕಾಸರವಳ್ಳಿ ಅವರ ತಾಜಾ ಕಥೆ ತುಂಬಾ ಹಿಡಿಸಿದೆ. ಅಷ್ಟೇ ಅಲ್ಲ, ಗಿರೀಶ್ ಕಾಸರವಳ್ಳಿ ಅವರ ಸಿನಿಮಾಗಳನ್ನೂ 'ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ಗಳಲ್ಲಿ ನೋಡಿ ಇಷ್ಟಪಟ್ಟಿದ್ದೂ ಕನ್ನಡ ಸಿನಿಮಾಗೆ ಬರಲು ಕಾರಣ ಎಂದು ಹೇಳಿಕೊಂಡಿದ್ದಾರೆ.

'ನಾನು ಭಾಷೆ ಬಗ್ಗೆ ಎಂದಿಗೂ ಯೋಚಿಸುವುದಿಲ್ಲ. ಕಥೆ ತುಂಬಾ ಚೆನ್ನಾಗಿದ್ದರೆ, ಉತ್ತಮ ನಿರ್ದೇಶಕರು ಹಾಗೂ ಸಹ ನಟರಿದ್ದರೆ, ನನಗೆ ತೃಪ್ತಿ ನೀಡುವಂತಿದ್ದರೆ ನಟನೆಗೆ ಸದಾ ಸಿದ್ಧ. ಎಲ್ಲ ಕೆಲಸವನ್ನು ಹಣಕ್ಕೆಂದೇ ಮಾಡಲು ಸಾಧ್ಯವಿಲ್ಲ, ಹಣಕ್ಕೆ ತಕ್ಕಂತೆ ಕೆಲಸ ಮಾಡಲು ಆರಂಭಿಸಿದರೆ ಆತ್ಮತೃಪ್ತಿ ಕಳೆದುಕೊಳ್ಳಬಹುದು' ಎಂದು ಗಂಭೀರವಾಗಿಯೇ ಹೇಳಿದರು.

ಬಾಲಿವುಡ್‌ನಲ್ಲಿದ್ದು, ಪ್ರಾದೇಶಿಕ ಭಾಷಾ ಸಿನಿಮಾಗೆ ಬಂದರೆ ಬೆಲೆ ಕಡಿಮೆ ಆಗುತ್ತದೆ ಎಂಬುದನ್ನು ತಪ್ಪು ಕಲ್ಪನೆ ಎನ್ನುವ ಅವರು ಸಾಮರ್ಥ್ಯ ಇದ್ದರೆ ಯಾರೂ ಬೇಲಿ ಹಾಕಲಾರರು ಎಂಬುದನ್ನು ನಂಬಿದ್ದಾರೆ.

ಕೋಲ್ಕತ್ತದಲ್ಲಿ ಹುಟ್ಟಿದ ರಾಹುಲ್ ಮುಂಬೈಗೆ ಸಿನಿಮಾ ಜಾಡು ಹಿಡಿದು ಬಂದವರು. ಬಂಗಾಳಿ ಸಿನಿಮಾ ಮೂಲಕ ಸಿನಿಮಾ ಲೋಕಕ್ಕೆ ಕಾಲಿಟ್ಟರು. ಚಿತ್ರರಂಗದಲ್ಲಿ ಅವರು ಕೈ ಆಡಿಸದ ಕ್ಷೇತ್ರಗಳಿಲ್ಲ. ನಿರ್ದೇಶನ, ಸ್ಕ್ರೀನ್ ರೈಟರ್, ನಟನೆ ಎಲ್ಲದರಲ್ಲೂ ತೊಡಗಿಕೊಂಡರು. ಆ ಮೂಲಕ ಹಲವು ಅನುಭವಗಳನ್ನೂ ತೆಕ್ಕೆಗೆ ಹಾಕಿಕೊಂಡರು.

'ನಿರುತ್ತರ'ದಲ್ಲಿನ ಸಂಬಂಧಗಳ ತಲ್ಲಣಗಳ ಚಿತ್ರಣ ರಾಹುಲ್ ಅವರನ್ನು ಹೆಚ್ಚು ಸೆಳೆದಿದೆ. ಮನುಷ್ಯ ಮನುಷ್ಯನ ನಡುವಿನ ವ್ಯಾವಹಾರಿಕತೆ, ಪ್ರೀತಿ, ಭಾವಗಳ ಬದಲಾವಣೆ, ಸೂಕ್ಷ್ಮತೆ ಹೀಗೆ ಹಲವು ಆಯಾಮಗಳನ್ನೇ ಸಾರ ಮಾಡಿಕೊಂಡಿರುವ ನಿರುತ್ತರ, ಚಿಕ್ಕಟ್ಟೆನೊಂದಿಗಿನ ಬದುಕನ್ನೂ ತೆರೆದಿಡುವಂತಿದೆ ಎಂಬುದು ಅವರ ಅಭಿಪ್ರಾಯ. 'ಸಂಬಂಧಗಳನ್ನು ಕದಡುವ ಹಲವು ಅಗೋಚರ ಸೂಕ್ಷ್ಮ ಅಂಶಗಳೇ ಈ ಸಿನಿಮಾದ ಹೂರಣ' ಎಂದು ವಿವರಿಸುತ್ತಾರೆ.

ಸಿನಿಮಾದಲ್ಲಿ ಯಾವುದೇ ಪಾಸಿಟಿವ್ ಅಥವಾ ನೆಗೆಟಿವ್ ಎಂದು ಬಿಂಬಿಸಬಹುದಾದ ಪಾತ್ರಗಳಿಲ್ಲ. ನಾಲ್ಕು ಪಾತ್ರಗಳೊಂದಿಗೆ ಕಥೆ ಸಾಗುತ್ತದೆ.

ಒಳ್ಳೆ ಸಹ ನಟರು ಇದ್ದರೆ ಮಾತ್ರ ನಮ್ಮ ಅಭಿನಯವೂ ಅಚ್ಚುಕಟ್ಟಾಗಿರುತ್ತದೆ ಎನ್ನುವ ರಾಹುಲ್, ನೀವೊಬ್ಬರೇ ನಟಿಸಲು ಸಾಧ್ಯವೇ, ಅದಕ್ಕೆ ಬೆಲೆ ಇದೆಯೇ ಎಂದೂ ಪ್ರಶ್ನಿಸುತ್ತಾರೆ. ಯುರೋಪಿಯನ್ ಸಿನಿಮಾಗಳಲ್ಲಿ ಸಂಬಂಧಗಳೇ ಕಥಾವಸ್ತುಗಳಾಗಿವೆ. ಅದನ್ನು ಜನರೂ ಮೆಚ್ಚಿದ್ದಾರೆ. ಭಾರತದಲ್ಲೂ ಅಂಥ ಬದಲಾವಣೆ ಗಾಳಿ ಬೀಸಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

'ಭಾರತದಲ್ಲಿ ಪ್ರೇಕ್ಷಕರ ಅಭಿರುಚಿ ಚೆನ್ನಾಗಿದೆ. ತಂತ್ರಜ್ಞಾನ ಸಿನಿಮಾವನ್ನು ಮತ್ತಷ್ಟು ಮೇಲ್ಮಟ್ಟಕ್ಕೆ ಕೊಂಡೊಯ್ದಿದೆ. ಆದರೆ ಹಣದ ಮುಷ್ಟಿಯಲ್ಲೇ ಎಲ್ಲವೂ ಅಡಗಿರುವುದರಿಂದ ತುಂಬಾ ಒಳ್ಳೆ ಸಿನಿಮಾಗಳು ಗೌಣವಾಗುತ್ತಿದೆ' ಎಂಬುದನ್ನು ಅವರು ಒತ್ತಿ ಹೇಳಿದರು.

ಸಿನಿಮಾ, ಕ್ರಿಯಾಶೀಲತೆ ಹಾಗೂ ಹಣ ಈ ಮೂರರ ಬಗ್ಗೆಯೂ ಮಾತನಾಡುತ್ತಾ, 'ಸಿನಿಮಾವನ್ನು ಹೇಗೆ ಅರ್ಥೈಸಿಕೊಳ್ಳಬಹುದು ಎಂದರೆ, ಹಣಕ್ಕಾಗಿ ಸಿನಿಮಾ ಮಾಡುವುದು, ಶರ್ಟ್ ಅನ್ನು ಸುಂದರವಾಗಿ ತಯಾರಿಸುವಂತೆ. ಕಾಲರ್, ಬಟನ್ ಎಲ್ಲಿರಬೇಕೋ ಅಲ್ಲಿರುತ್ತದೆ. ಆದರೆ ಕ್ರಿಯಾಶೀಲವಾಗಿ ಮಾಡಲು ಹೋದಾಗ ಶರ್ಟ್‌ನ ಬಟನ್ ಹಿಂಬದಿ ಹೋಗಿರಬಹುದು. ಅದು ಕೆಲವರಿಗೆ ಹಿಡಿಸುತ್ತದೆ, ಕೆಲವರಿಗೆ ಒಗ್ಗಿಕೊಳ್ಳುವುದಿಲ್ಲ. ಸಿನಿಮಾ ಅಂದರೆ ಹೀಗೆ' ಎಂದು ನಿದರ್ಶನವನ್ನೂ ಕೊಟ್ಟರು.

ಸಾಕಷ್ಟು ಕೆಲಸಗಳನ್ನು ಬಗಲಲ್ಲಿಟ್ಟುಕೊಂಡಿರುವ ರಾಹುಲ್, ಜೋಯಾ ಅಕ್ತರ್ ಅವರ 'ದಿಲ್ ಧಡಕನ್' ಮುಗಿಸುವ ತರಾತುರಿಯಲ್ಲಿದ್ದಾರೆ. ಸೋಹಾ ಅಲಿ ಖಾನ್ ಅವರೊಂದಿಗೆ ಹಿಂದಿ ಸಿನಿಮಾ 'ಜೀನೆ ದೋ' ಪ್ರಾರಂಭಿಸಿದ್ದಾರೆ. ಸಹನಾ ಗೋಸ್ವಾಮಿ ಅವರ 'ಅಂಡರ್ ಕನ್‌ಸ್ಟ್ರಕ್ಷನ್' ಸಿನಿಮಾ ಕೈಗೆತ್ತಿಕೊಂಡಿದ್ದಾರೆ. 'ವಿಶ್ವರೂಪಂ 2' ಮುಗಿಸಿದ್ದು, ಬೆಂಗಾಲಿ ಡಿಟೆಕ್ಟಿವ್ ಸಿನಿಮಾವೊಂದರಲ್ಲಿ ತೊಡಗಿಕೊಂಡಿದ್ದಾರೆ.

## ಬಾಲ್ಯದ ನಂಟು

ಬೆಂಗಳೂರಿನ ಬಗ್ಗೆ ಕೇಳುತ್ತಿದ್ದಂತೆ, 1970ರ ಇಸವಿಗೆ ಮರಳಿದರು ರಾಹುಲ್. 'ಚಿಕ್ಕವನಿದ್ದಾಗ ಸ್ವಲ್ಪ ಸಮಯ ಇಲ್ಲಿಗೆ ಬಂದಿದ್ದೆ. ಆಗ ಬೆಂಗಳೂರು ಹಿಲ್ ಸ್ಟೇಷನ್‌ನಂತಿತ್ತು. ಒಳ್ಳೊಳ್ಳೆ ಮನೆಗಳು, ಆಟವಾಡಲು ಅತ್ಯುತ್ತಮ ಸ್ಥಳಗಳು ಎಲ್ಲಾ ಇತ್ತು. ಈಗ ಅವೆಲ್ಲ ಕಡಿಮೆಯಾಗಿದೆ, ಆದರೂ ಸೌಂದರ್ಯ ಕಳೆದುಕೊಂಡಿಲ್ಲ' ಎಂದರು.

ಇಲ್ಲಿನ 'ಥಿಯೇಟರ್ ಸಂಸ್ಕೃತಿ' ಬಗ್ಗೆ ಹೊಗಳಿದ ರಾಹುಲ್ ಅವರನ್ನು ಸೆಳೆದಿರುವುದು ಇಲ್ಲಿನವರ ಸಾಂಸ್ಕೃತಿಕ ಶಿಕ್ಷಣ. ಕರ್ನಾಟಕ ಹಾಗೂ ಶಾಸ್ತ್ರೀಯ ಸಂಗೀತದಲ್ಲೂ ಬೆಂಗಳೂರು ಒಳ್ಳೆಯ ಸ್ಥಾನದಲ್ಲಿದೆ ಎಂದು ಹೊಗಳಿದರು. ಸ್ವತಃ ಕ್ರೀಡಾಪಟು ಆಗಿರುವುದರಿಂದ ರಾಹುಲ್‌ಗೆ ಇಲ್ಲಿನ ಕ್ರೀಡಾ ಸಂಸ್ಕೃತಿ ಬಗ್ಗೆ ಹೆಮ್ಮೆ ಇದೆ. ಕೋಲ್ಕತ್ತ, ನ್ಯೂಯಾರ್ಕ್, ಲಖನೌ ಇಂಥ ಕೆಲವೇ ನಗರಗಳಲ್ಲಿ ಕ್ರೀಡೆಗೆ ಒಳ್ಳೆ ಸ್ಥಾನವಿದೆ. ಬೆಂಗಳೂರು ಆ ಸಾಲಿನಲ್ಲಿದೆ ಎಂದರು. ತಮಿಳಿಗೆ ಹೋಲಿಸಿದರೆ, ಕನ್ನಡ ತುಂಬಾ ಸುಲಭ ಎಂದೂ ಹೇಳಿದರು.

## ಕ್ರೀಡಾ ಪಟು ರಾಹುಲ್ ಬೋಸ್

ಶಾಲಾ ದಿನಗಳಲ್ಲೇ ಹತ್ತು ಕ್ರೀಡೆಗಳಲ್ಲಿ ತೊಡಗಿಕೊಂಡಿದ್ದರು ರಾಹುಲ್. ಟೆನಿಸ್, ಫುಟ್ಬಾಲ್, ಕ್ರಿಕೆಟ್, ರಗ್ಬಿ, ಟೇಬಲ್ ಟೆನಿಸ್, ಸ್ಕ್ವಾಷ್, ಬ್ಯಾಡ್ಮಿಂಟನ್, ಸ್ನೂಕರ್, ಬಾಸ್ಕೆಟ್ ಬಾಲ್, ವಾಟರ್ ಪೋಲ್, ಹಾಕಿ ಎಲ್ಲದರಲ್ಲೂ ಎತ್ತಿದ ಕೈ. ಹತ್ತನೇ ವಯಸ್ಸಿಗೇ ಕ್ಲಬ್ ಲೆವೆಲ್‌ನಲ್ಲಿ ಕ್ರಿಕೆಟ್ ಅನ್ನು ಕ್ರೀಡೆಯಾಗಿ ಆಯ್ದುಕೊಂಡಿದ್ದರು. ಹದಿನಾಲ್ಕನೇ ವಯಸ್ಸಿಗೆ ರಗ್ಬಿ ಆಡಲು ಆರಂಭಿಸಿ, ಮೂವತ್ತೂರು ವರ್ಷಗಳಿಂದ ತೊಡಗಿಕೊಂಡಿದ್ದಾರೆ. 1998ರಿಂದ 2009ರವರೆಗೂ ಭಾರತಕ್ಕಾಗಿ ಆಡಿದ್ದಾರೆ. ಸ್ಕ್ವಾಷ್, ಹೈಕಿಂಗ್, ಟೆನಿಸ್ ಸ್ವಿಮ್, ರಗ್ಬಿ, ಫುಟ್ಬಾಲ್ ಎಲ್ಲವನ್ನೂ ಈಗಲೂ ಮುಂದುವರೆಸಿದ್ದಾರೆ.

'ಕ್ರೀಡೆ ನನಗೆ ತುಂಬಾ ಮುಖ್ಯ. ಅದು ನನ್ನ ಶಕ್ತಿ. ಏಕಾಗ್ರತೆ ನೀಡುತ್ತದೆ. ಹೇಗೆ ಶಾಂತವಾಗಿರಬೇಕು, ಸಹನೆಯಿಂದಿರಬೇಕು ಎಂದು ಕಲಿಸಿಕೊಟ್ಟಿದೆ. ಒತ್ತಡ ನಿವಾರಿಸುತ್ತದೆ. ನನಗೆ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಕೆಲಸ ಮಾಡಲು ಪ್ರೇರೇಪಿಸಿದೆ, ಫಲಿತಾಂಶವನ್ನು ಎಂದಿಗೂ ನಿರೀಕ್ಷಿಸದಿರು ಎನ್ನುವುದನ್ನೂ ಕಲಿಸಿಕೊಟ್ಟಿದೆ' ಎಂದು ಭಾವುಕರಾಗುತ್ತಾರೆ ರಾಹುಲ್.

-ಸುಮಲತಾ ಎನ್.

# 70, Samruddhi, 1st Main, 2nd Block, Ayyappanagar, K. R. Puram, Bangalore – 560 036
Telefax : 080 25619525 Mobile : 094482 21565, 094489 02288
E-mail : saramedianet@gmail.com, amrithjogi@gmail.com
**www.saramedianet.com**